ಕೃಷಿಯಿಂದ ಬದುಕು

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಸಂದೀಪ್ ಮಂಜುನಾಥ್
ಎಂ.ಎಸ್ಸಿ.ಕೃಷಿ, ಹುಣಸೂರು



ಪ್ರತಿ ವರ್ಷ ಜೂನ್ 5ಕ್ಕೆ ವಿಶ್ವ ಪರಿಸರ ದಿನವನ್ನು ನಮ್ಮ ಬಾಲ್ಯದ ದಿನಗಳಿಂದಲೂ ಆಚರಿಸುತ್ತಾ ಬಂದಿದ್ದೇವೆ. ಆಗೆಲ್ಲಾ ಶಾಲೆಯ ಮತ್ತು ಹಳ್ಳಿಯ ಸುತ್ತ ಗಿಡ ನೆಟ್ಟು ಪರಿಸರದ ಬಗ್ಗೆ ಕೆಲ ಮಾತುಗಳನ್ನಾಡಿ “ಮನೆಗೊಂದು ಗಿಡ, ಊರಿಗೊಂದು ವನ” ಎಂಬಿತ್ಯಾದಿ ಘೋಷಣೆಗಳನ್ನು ಕೂಗಿ ಬರುತ್ತಿದ್ದೆವು. ಆಗಿನ್ನೂ ನಮಗೆ ಪರಿಸರ ಮಾಲಿನ್ಯ ಮತ್ತು ಅದರಿಂದಾಗುತ್ತಿರುವ ಅನಾಹುತಗಳು ನೇರವಾಗಿ ನಮ್ಮ ಮೇಲೆ ಪರಿಣಾಮ ಬೀರುತ್ತಿರಲಿಲ್ಲವಾದ್ದರಿಂದ ಯಾರೂ ಅಷ್ಟಾಗಿ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಮಿತಿ ಮೀರಿದ ಪ್ಲಾಸ್ಟಿಕ್ ಬಳಕೆಯಿಂದ ಸಕಲ ಜೀವರಾಶಿಗಳ ಉಳಿವಿಗೆ ಸಂಕಷ್ಟ ಎದುರಾಗಿದೆ. ಗ್ಲೋಬಲ್ ವಾರ್ಮಿಂಗ್ ನಮ್ಮ ಕಣ್ಣೆದುರಿಗೆ ಜರುಗುತ್ತಿದೆ. ವರ್ಷದಿಂದ ವರ್ಷಕ್ಕೆ ತಾಪಮಾನ ಏರುತ್ತಿದೆ. ಗಿಡ ನೆಡುವುದರ ಜೊತೆಗೆ ಪರಿಸರ ಪೂರಕ ಜೀವನಶೈಲಿ ಅಳವಡಿಸಿಕೊಳ್ಳಬೇಕಿದೆ. ನಿಮಗೆಲ್ಲಾ ತಿಳಿದಿರುವ ಹಾಗೆ ಪ್ರತಿ ವರ್ಷ ವಿಶ್ವ ಸಂಸ್ಥೆಯವರು ಪರಿಸರ ದಿನಾಚರಣೆಗೆ ಒಂದು ಧ್ಯೇಯ ವಾಕ್ಯ ಪ್ರಕಟಿಸುತ್ತಾರೆ. ಈ ವರ್ಷದ ಧ್ಯೇಯ ವಾಕ್ಯ #BeatPlasticPollution.

ನೀವೊಮ್ಮೆ ವಿಶ್ವಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ವಾರ್ಷಿಕ 400 ಮಿಲಿಯನ್ ಟನ್ ಪ್ಲಾಸ್ಟಿಕ್ ಉತ್ಪಾದಿಸಲಾಗುತ್ತಿದೆ. ಇದರಲ್ಲಿ ಅರ್ಧದಷ್ಟು ಏಕಬಳಕೆಯ ಪ್ಲಾಸ್ಟಿಕ್ ಆಗಿದೆ. ಇನ್ನೂ ಅಪಾಯಕಾರಿ ಸಂಗತಿಯೆಂದರೆ ಇದರಲ್ಲಿ ಕೇವಲ 10% ಮಾತ್ರ ಮರು ಬಳಕೆಯಾಗುತ್ತಿದೆ. ಉಳಿದಂತೆ ಎಲ್ಲವೂ ತಿಪ್ಪೆ, ಕೆರೆ, ನದಿ, ಸಮುದ್ರದ ಪಾಲಾಗಿ ಸಕಲ ಜೀವರಾಶಿಗಳ ಪ್ರಾಣಕ್ಕೆ ಕುತ್ತು ತರುತ್ತಿವೆ. ಕುಡಿಯುವ ನೀರಿನಲ್ಲೂ, ಉಪ್ಪಿನಲ್ಲೂ ಮೈಕ್ರೋ ಪ್ಲಾಸ್ಟಿಕ್ ಇದೆಯೆಂದು ಕೆಲ ವರದಿಗಳು ಹೇಳುತ್ತವೆ. ಹಲವು ರೋಗಗಳಿಗೆ ಅದರಲ್ಲೂ ಕ್ಯಾನ್ಸರ್‌ಗೆ ಪ್ರಮುಖ ಕಾರಣ ಪ್ಲಾಸ್ಟಿಕ್ ಬಳಕೆ. ಸರ್ಕಾರಗಳು ಸಮಸ್ಯೆಯನ್ನು ಬಗೆಹರಿಸುತ್ತವೋ ಬಿಡುತ್ತವೋ. ನಾವು ವೈಯಕ್ತಿಕವಾಗಿ ಪರಿಸರ ಸಂರಕ್ಷಣೆಗೆ ಎಷ್ಟು ಕೊಡುಗೆ ನೀಡುತ್ತೇವೆ ಎಂಬುದು ಮುಖ್ಯ. 2016ರಲ್ಲಿ ನಮ್ಮ ಮದುವೆಗೆ ಸಂಪೂರ್ಣ ಸಾವಯವ ಸಿರಿಧಾನ್ಯಗಳಿಂದ ಅಡುಗೆ ಮಾಡಿಸಿದ್ದೆವು. ಸಾಕಷ್ಟು ಜನ ಸರಿಯಾಗಿ ಊಟ ಮಾಡದೆ ಎಲೆಯಲ್ಲಿ ವ್ಯರ್ಥ ಮಾಡಿದ್ದರು. ಕ್ರಮೇಣವಾಗಿ, ಅದರಲ್ಲೂ ಕರೋನಾ ನಂತರ ಜನರಿಗೆ ಆರೋಗ್ಯ ಕಾಳಜಿ ಹೆಚ್ಚಾಯಿತು. ಸ್ವಯಂ ವಿಶ್ವಸಂಸ್ಥೆಯೇ 2023 ಅನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಿಸಿದೆ. ಹೀಗೆ ಜನರು ಏನನ್ನು ಬಯಸುತ್ತಾರೋ ಖಂಡಿತವಾಗಿ ಅದು ಕ್ರಮೇಣ ಆಡಳಿತ ಮಟ್ಟದಲ್ಲಿ ಜಾರಿಗೊಳ್ಳುತ್ತದೆ. ಹಾಗಾಗಿ ಈ ಲೇಖನದಲ್ಲಿ ನಾವು ರೈತರಾಗಲಿ, ಗ್ರಾಹಕರಾಗಲಿ ನಮ್ಮ ವೈಯಕ್ತಿಕ ಮಟ್ಟದಲ್ಲಿ ಪರಿಸರ ಉಳಿಸಲು ಏನೇನು ಮಾಡಬಹುದೆಂದು ಆಲೋಚಿಸೋಣ. ನಮ್ಮ ಮನೆಯಲ್ಲಿ ಅಳವಡಿಸಿಕೊಂಡಿರುವ ಕೆಲ ಪರಿಸರಸ್ನೇಹಿ ಅಭ್ಯಾಸಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನವಿದು.

ನನ್ನ ವೈಯಕ್ತಿಕ ಅನುಭವಗಳನ್ನು ಹೇಳಬೇಕೆಂದರೆ, ನಾನು ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ಓದುವಾಗ ಅಲ್ಲಿನ ಹಿರಿಯ ಪ್ರಾಧ್ಯಾಪಕರು ಹೇಳಿದ ಒಂದು ಘಟನೆ ನನ್ನ ಜೀವನದ ದಿಕ್ಕನ್ನು ಬದಲಿಸಿತು. ಕೆಲ ದಶಕಗಳ ಹಿಂದೆ ವಿದ್ಯಾರ್ಥಿಗಳಿಗೆ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಪಕ್ಕದಲ್ಲಿರುವ ವೃಷಾಭವತಿ ನದಿಯಲ್ಲಿ ಸ್ನಾನ ಮಾಡಲು ಬಿಟ್ಟಿದ್ದರಂತೆ. ಪ್ರಸ್ತುತ ಅದು ಕೆಂಗೇರಿ ಮೋರಿಯಾಗಿದೆ. ನಿತ್ಯ ನಮ್ಮ ದೇಹದ ಕೊಳೆ ತೆಗೆಯಲು ಸೋಪು ಶಾಂಪೂ ಮತ್ತಿತರ ರಾಸಾಯನಿಕಗಳನ್ನು ಬಳಸುತ್ತಿದ್ದೇವೆ. ಇನ್ನು ನಾವು ಧರಿಸುವ ಬಟ್ಟೆಗಳು ಬಣ್ಣ ಬಣ್ಣಗಳಿಂದ ಕೂಡಿರಬೇಕೆಂದು ಬಯಸುತ್ತೇವೆ. ಕೆಂಗೇರಿ ಬಿಡದಿ ಬಳಿಯಿರುವ ಗಾರ್ಮೆಂಟ್ಸ್‌ಗಳಿಂದ ಎಷ್ಟು ರಾಸಾಯನಿಕಗಳು ಹೊರ ಹೋಗುತ್ತವೆಂದು ನಾವು ಆಲೋಚಿಸಿರುವುದಿಲ್ಲ. ಇಂತಹ ರಾಸಾಯನಿಕಗಳು ನನ್ನಿಂದಾಗಿ ವೃಷಾಭಾವತಿ ಸೇರಬಾರದೆಂದು ನಾನು 8ನೇ ತರಗತಿಯಲ್ಲೇ ಆಲೋಚಿಸಿದ್ದೆ.



**ಕಳೆದ 7 ವರ್ಷಗಳಿಂದ ನಾವು ಪ್ಯಾಕೆಟ್ ಹಾಲು ಉಪಯೋಗಿಸಿಲ್ಲ. ಬೆಂಗಳೂರಿನಲ್ಲಿದ್ದಾಗಲೂ ನೇರವಾಗಿ ರೈತರಿಂದ ಗಾಜಿನ/ಸ್ಟೀಲ್ ಕ್ಯಾನ್‌ನಲ್ಲಿ ಖರೀದಿಸುತ್ತಿದ್ದೆವು. ಹುಣಸೂರಿಗೆ ಬಂದ ನಂತರ ಕೆಲ ದಿನಗಳು ಪಕ್ಕದ ಹಳ್ಳಿಯವರಿಂದ ಕ್ಯಾನ್‌ನಲ್ಲಿ ಹಾಲು ಖರೀದಿಸಿದೆವು. ನಂತರ ನಮ್ಮ ತೋಟಕ್ಕೆ ದೇಸಿ ಹಸುಗಳು ಬಂದ ಮೇಲೆ ನಮ್ಮಲ್ಲೇ ಹಾಲು ಸಿಗುತ್ತದೆ. ನೀವೇ ಯೋಚಿಸಿ. 7 ವರ್ಷಗಳಲ್ಲಿ ದಿನಕ್ಕೆ ಎರಡು ಕವರ್‌ಗಳಂತೆ 5,000 ಕವರ್‌ಗಳನ್ನು ನಾವು ಉಳಿಸಿದ್ದೇವೆ. ಇದು ನಮಗೆ ಹೆಮ್ಮೆಯ ವಿಷಯ. ಎಲ್ಲರೂ ಹೀಗೆ ಮಾಡಬೇಕೆಂದಿಲ್ಲ. ನಗರ ಹೊರವಲಯದಲ್ಲಿ ಇರುವವರು ನೇರವಾಗಿ ನಂದಿನಿ ಕಲೆಕ್ಷನ್ ಪಾಯಿಂಟ್‌ಗೆ ಹೋದರೆ ನಮ್ಮ ಪಾತ್ರೆಯಲ್ಲೇ ಹಾಲು ತರಬಹುದು. ಮನ್ನಸ್ಸು ಮಾಡಬೇಕಷ್ಟೇ. ಇದೇ ರೀತಿ ಹಲವು ವರ್ಷಗಳಿಂದ ನಾವು ಪ್ಲಾಸ್ಟಿಕ್ ಕವರ್‌ನಲ್ಲಿ ಅಡುಗೆ ಎಣ್ಣೆ ಖರೀದಿಸಿಲ್ಲ. ಎತ್ತಿನ ಗಾಣದ ಎಣ್ಣೆಯನ್ನು ಸ್ಟೀಲ್ ಕ್ಯಾನ್‌ನಲ್ಲಿ ಮನೆಗೆ ತರುತ್ತೇವೆ. ದೇಸಿರಿ ನವೀನ್‌ರವರು ದೇಶಾದ್ಯಂತ ಇದೇ ರೀತಿ ಅಡುಗೆ ಎಣ್ಣೆ ತಲುಪಿಸುವ ವ್ಯವಸ್ಥೆ ರೂಪಿಸಿದ್ದಾರೆ. ಅವರು ಕಳೆದ 6 ವರ್ಷಗಳಲ್ಲಿ 6.5 ಟನ್ ಪ್ಲಾಸ್ಟಿಕ್ ಉಳಿಸಿದ್ದಾರೆ.**

ಹಾಗಾಗಿ ಅಂದಿನಿಂದ ಆದಷ್ಟು ಖಾದಿ ಮತ್ತು ನೈಸರ್ಗಿಕ ಬಣ್ಣಗಳಿಂದ ತಯಾರಿಸಿದ ಬಟ್ಟೆಗಳನ್ನು ಖರೀದಿಸುತ್ತಿದ್ದೇವೆ. ತಲೆಗೆ ಸೀಗೆ ಪುಡಿ, ಚಿಗರೆ ಪುಡಿ ಬಳಸುತ್ತಿದ್ದೇವೆ. ಮದುವೆಯಾದ ನಂತರ ಅತ್ತೆ ಕಮಲಮ್ಮನವರು ಬೆಳೆದ ಸೀಗೆ, ಅಂಟುವಾಳ, ಚಿಗರೆ ಪುಡಿಗಳನ್ನು ನೇರವಾಗಿ ಗ್ರಾಹಕರಿಗೆ ಪತ್ನಿ ಸುಧಾ ಮಾರಾಟ ಮಾಡುತ್ತಿದ್ದಾಳೆ. ಇದರಿಂದ ನಮ್ಮ ದೇಹಕ್ಕೆ ಹಾನಿಕಾರಕ ರಾಸಾಯನಿಕ ತಗಲುವುದಿಲ್ಲ ಮತ್ತು ಸ್ನಾನದ ಮನೆಯಿಂದ ಹೊರ ಹೋಗುವ ನೀರು ಕಲುಷಿತವಾಗಿರುವುದಿಲ್ಲ.

ಒಬ್ಬ ಮನುಷ್ಯ ಎರಡು ದಿನಕ್ಕೆ ಒಮ್ಮೆ ತಲೆ ಸ್ನಾನ ಮಾಡುತ್ತಾನೆ ಎಂದಿಟ್ಟುಕೊಳ್ಳೋಣ. ಸ್ಯಾಚೆಟ್ ಆದರೆ ವರ್ಷಕ್ಕೆ 175 ಮತ್ತು ಬಾಟೆಲ್ ಆದರೆ 10–15 ಬೇಕಾಗಬಹುದು. ನಮ್ಮ ಒಂದು ಕುಟುಂಬ ಶಾಂಪೂಗೆ ಬದಲಿ ಸೀಗೆಕಾಯಿಗೆ ಬಳಸಿದರೆ ಎಷ್ಟು ಪ್ಲಾಸ್ಟಿಕ್ ಉಳಿಸಿದಂತಾಗುತ್ತದೆ ಒಮ್ಮೆ ಯೋಚಿಸಿ. ಅದೇ ರೀತಿ ಎಲ್ಲರೂ ಹೀಗೆ ಮಾಡಿದರೆ? ಇನ್ನು ಪಾತ್ರೆ ತೊಳೆಯಲು ಅಂಟುವಾಳ ಪುಡಿಗೆ ಬೂದಿ, ನಿಂಬೆ ಸಿಪ್ಪೆಯ ಪುಡಿ ಮತ್ತು ಬೇವಿನ ಎಲೆಯ ಪುಡಿ ಸೇರಿಸಿ ನಮ್ಮ ಮನೆಯಲ್ಲೇ ಡಿಶ್ ವಾಶ್ ಪೌಡರ್ ತಯಾರಿಸಿದ್ದೇವೆ. ಈ ಪುಡಿಯಿಂದ ತೆಂಗಿನ ನಾರು ಅಥವಾ ತುಪ್ಪದ ಹೀರೆ ನಾರಿನೊಂದಿಗೆ ಪಾತ್ರೆ ತೊಳೆದರೆ ಎಂಥಹ ಜಿಡ್ಡೂ ಮಾಯವಾಗುತ್ತದೆ. ನಿಮಗೆ ಡಿಶ್ ವಾಶ್ ಕಷ್ಟವೆನಿಸಿದರೆ ಕನಿಷ್ಟ ಹಸಿರು ಬಣ್ಣದ ನೈಲಾನ್ ಸ್ಕ್ರಬ್ಬರ್ ಬಳಸುವುದನ್ನು ನಿಲ್ಲಿಸಿ. ತಿಂಗಳಿಗೆ ನಾಲ್ಕೆಂದರೂ ವರ್ಷಕ್ಕೆ 50–60 ಸ್ಕ್ರಬ್ಬರ್ ನಮ್ಮ ಒಂದು ಮನೆಯಿಂದಲೇ ಮಣ್ಣಿಗೆ ಸೇರುವುದು ತಪ್ಪುತ್ತದೆ. ಇನ್ನು ಎಲ್ಲಾ ಭಾರತೀಯರು ಮನಸ್ಸು ಮಾಡಿದರೆ?

ತರಕಾರಿ ಹೆಚ್ಚಲು ಈಳಿಗೆ ಮಣೆ ಉಪಯೋಗಿಸುವ ಅವಕಾಶ ನಮಗಿದೆ. ನಿಮಗೆ ಕಷ್ಟವಾದರೆ ಕನಿಷ್ಟ ಪ್ಲಾಸ್ಟಿಕ್ ಮಣೆ ಬದಲಿಗೆ ಮರದ ಮಣೆ ಬಳಸಬಹುದಲ್ಲವೇ? ಇತ್ತೀಚೆಗೆ ನೋಡಸ್ಟ್ ಎನ್ನುವ ಹೆಸರಿನಲ್ಲಿ ಕಸದ ಪೊರಕೆಯನ್ನು ಪ್ಲಾಸ್ಟಿಕ್‌ನಿಂದ ಮಾಡಲಾಗುತ್ತಿದೆ. ಕೇವಲ ಹಿಡಿಯಷ್ಟೇ ಅಲ್ಲದೆ ಸಂಪೂರ್ಣ ಪೊರಕೆ ಪ್ಲಾಸ್ಟಿಕ್. ನಮ್ಮ ತೋಟದಲ್ಲಿ ಇದಕ್ಕೆ ಪರ್ಯಾಯವಾಗಿ ಪೊರಕೆ ಗಿಡವನ್ನು ಬೆಳೆಯುತ್ತಿದ್ದೇವೆ. ಸುಧಾ ಅವರ ಊರಿನಲ್ಲಿ ಹಂಚಿಕಡ್ಡಿ ಧಾರಾಳವಾಗಿ ದೊರೆಯುತ್ತದೆ. ಅತ್ತೆ ಕಮಲಮ್ಮ ವರ್ಷಕ್ಕೆ ಆಗುವಷ್ಟು ಹಂಚಿಕಡ್ಡಿ ಪೊರಕೆ ಕೊಡುತ್ತಾರೆ. ಇದೊಂದು ಗ್ರಾಮೀಣ ಉದ್ಯಮವೂ ಹೌದು. ಸುಧಾ ಅವರ ನೆಂಟರಿಷ್ಟರು ಬೇಸಿಗೆಯಲ್ಲಿ ಹಂಚಿಕಡ್ಡಿ ಪೊರಕೆ ಮಾಡಿ ಸಾವಿರಾರು ರೂಪಾಯಿ ಸಂಪಾದಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಇದಕ್ಕೆ ಬೇಡಿಕೆ ಕಡಿಮೆಯಾಗುತ್ತಿರುವುದು ಬೇಸರದ ಸಂಗತಿ. ನಾವೆಲ್ಲಾ ಮನಸ್ಸು ಮಾಡಿ ಹಂಚಿಕಡ್ಡಿ, ಈಚಲು, ತೆಂಗಿನ ಗರಿ, ಬೊಂಬಾಯಿ ಬರಲುಗಳನ್ನು ಬಳಸಿ ಗ್ರಾಮೀಣಾಭಿವೃದ್ಧಿಗೆ ಸಹಕರಿಸಬಹುದಲ್ಲವೇ? ಬಟ್ಟೆ ಒಗೆಯಲು ಅಂಟುವಾಳ ಕಾಯಿಯನ್ನು ಸ್ವಲ್ಪ ಹೊತ್ತು ನೀರಿನಲ್ಲಿ ನೆನೆಸಿ ನಂತರ ಬೇಯಿಸಿ ರಸವನ್ನು ಬಟ್ಟೆಗೆ ಹಾಕಿ ಸ್ವಚ್ಛ ಮಾಡುತ್ತಿದ್ದೇವೆ. ಆದರೆ ಇದು ಹೆಚ್ಚು ಸಮಯವನ್ನು ಬೇಡುವ ಕೆಲಸ. ಹಾಗಾಗಿ ಒಮ್ಮೊಮ್ಮೆ ಸೋಪಿನ ಪುಡಿ ಬಳಸುತ್ತೇವೆ. ಯಾರಿಗಾದರೂ ಇನ್ನೂ ಸರಳ ವಿಧಾನ ತಿಳಿದಿದ್ದರೆ ನಮಗೆ ತಿಳಿಸಿ, ನಾವೂ ಪ್ರಯತ್ನಿಸುತ್ತೇವೆ.

ಕಳೆದ 7 ವರ್ಷಗಳಿಂದ ನಾವು ಪ್ಯಾಕೆಟ್ ಹಾಲು ಉಪಯೋಗಿಸಿಲ್ಲ. ಬೆಂಗಳೂರಿನಲ್ಲಿದ್ದಾಗಲೂ ನೇರವಾಗಿ ರೈತರಿಂದ ಗಾಜಿನ/ಸ್ಟೀಲ್ ಕ್ಯಾನ್‌ನಲ್ಲಿ ಖರೀದಿಸುತ್ತಿದ್ದೆವು. ಹುಣಸೂರಿಗೆ ಬಂದ ನಂತರ ಕೆಲ ದಿನಗಳು ಪಕ್ಕದ ಹಳ್ಳಿಯವರಿಂದ ಕ್ಯಾನ್‌ನಲ್ಲಿ ಹಾಲು ಖರೀದಿಸಿದೆವು. ನಂತರ ನಮ್ಮ ತೋಟಕ್ಕೆ ದೇಸಿ ಹಸುಗಳು ಬಂದ ಮೇಲೆ ನಮ್ಮಲ್ಲೇ ಹಾಲು ಸಿಗುತ್ತದೆ. ನೀವೇ ಯೋಚಿಸಿ. 7 ವರ್ಷಗಳಲ್ಲಿ ದಿನಕ್ಕೆ ಎರಡು ಕವರ್‌ಗಳಂತೆ 5,000 ಕವರ್‌ಗಳನ್ನು ನಾವು ಉಳಿಸಿದ್ದೇವೆ. ಇದು ನಮಗೆ ಹೆಮ್ಮೆಯ ವಿಷಯ. ಎಲ್ಲರೂ ಹೀಗೆ ಮಾಡಬೇಕೆಂದಿಲ್ಲ. ನಗರ ಹೊರವಲಯದಲ್ಲಿ ಇರುವವರು ನೇರವಾಗಿ ನಂದಿನಿ ಕಲೆಕ್ಷನ್ ಪಾಯಿಂಟ್‌ಗೆ ಹೋದರೆ ನಮ್ಮ ಪಾತ್ರೆಯಲ್ಲೇ ಹಾಲು ತರಬಹುದು. ಮನ್ನಸ್ಸು ಮಾಡಬೇಕಷ್ಟೇ. ಇದೇ ರೀತಿ ಹಲವು ವರ್ಷಗಳಿಂದ ನಾವು ಪ್ಲಾಸ್ಟಿಕ್ ಕವರ್‌ನಲ್ಲಿ ಅಡುಗೆ ಎಣ್ಣೆ ಖರೀದಿಸಿಲ್ಲ. ಎತ್ತಿನ ಗಾಣದ ಎಣ್ಣೆಯನ್ನು ಸ್ಟೀಲ್ ಕ್ಯಾನ್‌ನಲ್ಲಿ ಮನೆಗೆ ತರುತ್ತೇವೆ. ದೇಸಿರಿ ನವೀನ್‌ರವರು ದೇಶಾದ್ಯಂತ ಇದೇ ರೀತಿ ಅಡುಗೆ ಎಣ್ಣೆ ತಲುಪಿಸುವ ವ್ಯವಸ್ಥೆ ರೂಪಿಸಿದ್ದಾರೆ. ಅವರು ಕಳೆದ 6 ವರ್ಷಗಳಲ್ಲಿ 6.5 ಟನ್ ಪ್ಲಾಸ್ಟಿಕ್ ಉಳಿಸಿದ್ದಾರೆ.

ಡಿ. ಪ್ರತಾಪ್ ಕುಮಾರ್ ಪಾಂಡೆಯವರ ಸಲಹೆಯಂತೆ ಕಳೆದ 8 ವರ್ಷಗಳಿಂದ ನಾನು ಲೋಳೆಸರ/ಹಾಲಿನ ಕೆನೆ ಬಳಸಿ ಶೇವಿಂಗ್ ಮಾಡಿಕೊಳ್ಳುತ್ತಿದ್ದೇನೆ. ಮನೆಯಲ್ಲಿ ದೇಸಿ ಗೋವಿನ ಸಗಣಿಯಿಂದ ತಯಾರಾದ ಸೊಳ್ಳೆ ಬತ್ತಿ, ಧೂಪ, ಸೋಪು ಬಳಸುತ್ತೇವೆ. ಗೋಮೂತ್ರದ ಫಿನಾಯಿಲ್ ಬಳಸಿ ನೆಲ

ಸಾರಿಸುತ್ತೇವೆ. ಟಿಶ್ಯು ಪೇಪರ್‌ನಿಂದ ಬಹಳ ದೂರವಿದ್ದೇವೆ. ನಮ್ಮದೇ ನೀರಿನ ಬಾಟಲಿ ಜೊತೆಯಲ್ಲಿಟ್ಟುಕೊಂಡು ಪ್ರಯಾಣ ಮಾಡುತ್ತೇವೆ. ಮೈ ಉಜ್ಜಲು ನಮ್ಮ ತೋಟದ ತುಪ್ಪದ ಹೀರೆಕಾಯಿ ಸ್ಕ್ರಬ್ಬರ್/ಕಲ್ಲು ಬಳಸುತ್ತೇವೆ. ಕೈತೋಟದಲ್ಲಿ ಮನೆಗಾಗುವಷ್ಟು ಸೊಪ್ಪು ತರಕಾರಿ ಬೆಳೆಯುತ್ತೇವೆ. ಆದಷ್ಟು ಸ್ಥಳೀಯವಾಗಿ ಸಾವಯವ ಕೃಷಿಕರಿಂದ ನಮಗೆ ಬೇಕಾದ ಉತ್ಪನ್ನಗಳನ್ನು ಖರೀದಿಸುತ್ತೇವೆ. ಇದರಿಂದ ಪ್ಯಾಕೇಜಿಂಗ್ ಮತ್ತು ಸಾಗಾಣಿಕೆಯಲ್ಲಿ ವ್ಯಯಿಸುವ ಪೆಟ್ರೋಲ್ ತಕ್ಕ ಮಟ್ಟಿಗೆ ಉಳಿದಂತಾಗುತ್ತದೆ. ಇದನ್ನು ಕಾರ್ಬನ್ ಫೂಟ್ ಪ್ರಿಂಟ್ ಎನ್ನುವರು. ನಾವು ಬಳಸುವ ವಸ್ತುಗಳು ಎಷ್ಟು ಸಮೀಪದಿಂದ ಖರೀದಿಸುತ್ತೇವೋ ಅಷ್ಟು ಕಾರ್ಬನ್ ಫೂಟ್ ಪ್ರಿಂಟ್ ಕಡಿಮೆಯಿರುತ್ತದೆ. ಇದರಿಂದ ಸ್ಥಳೀಯ ರೈತರು ಮತ್ತು ಉತ್ಪಾದಕರಿಗೂ ಸಹಾಯವಾಗುತ್ತದೆ. ಮಕ್ಕಳಿಗೆ ಈಗಿಂದಲೇ ಪೇಪರ್ ಹೇಗೆ ತಯಾರಿಸುತ್ತಾರೆ, ಅದರಿಂದ ಎಷ್ಟು ಅರಣ್ಯನಾಶವಾಗುತ್ತದೆ ಮತ್ತು ಅದರ ಮಿತಬಳಕೆಯ ಹೇಗೆಂಬ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ಹೇಳಲಿಕ್ಕೆ ಮತ್ತು ಅಳವಡಿಸಿಕೊಳ್ಳುವುದಕ್ಕೆ ಸಾಕಷ್ಟಿದೆ. ನಾವೆಲ್ಲರೂ ಮನ್ನಸ್ಸು ಮಾಡಿ ಇಂದಿನಿಂದಲೇ ನಮ್ಮ ಜೀವನದಲ್ಲಿ ಸಣ್ಣ ಸಣ್ಣ ಬದಲಾವಣೆ ಮಾಡಿಕೊಳ್ಳಬೇಕಷ್ಟೆ.

ಕೊನೆಯದಾಗಿ – ಗೋಪಾಲ್ಸ್ ತಂಡ HEAL (Health Environment Agriculture Lifestyle) ಎನ್ನುವ ಧ್ಯೇಯವಾಕ್ಯದೊಂದಿಗೆ ಯುವಕರಲ್ಲಿ ಸುಸ್ಥಿರತೆ ಬಗ್ಗೆ ಅರಿವು ಮೂಡಿಸುತ್ತಿದೆ. ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್



ಕೋರ್ಸ್‌ಗಳನ್ನು ಪ್ರಾಯೋಜಿಸುತ್ತಿದೆ. ಮಾನ್ಯ ಪ್ರಧಾನಮಂತ್ರಿಗಳು ಸ್ವಚ್ಛ ಭಾರತ ಅಭಿಯಾನ ಆರಂಭಿಸಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣಕ್ಕೆ ಕರೆ ನೀಡಿದ್ದಾರೆ. ನಾವೂ ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟುವಲ್ಲಿ ಪ್ರಯತ್ನಿಸೋಣ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9480222804